೧೦ ಮೈಸೂರು ದಸರಾ

ಬನ್ನಿರಿ ಬನ್ನಿರಿ ಗೆಳೆಯರೆ ಬನ್ನಿರಿ
ಸಂಸ್ಕೃತಿನಗರಿ ಮೈಸೂರಿಗೆ
ವಿಶ್ವವಿಖ್ಯಾತ ದಸರಾ ನೋಡುತ
ನಮಿಸುತ ಚಿನ್ನದ ಅಂಬಾರಿಗೆ


ಸಾವಿರ ಮೆಟ್ಟಿಲ ಚಾಮುಂಡಿ ಬೆಟ್ಟವ
ಮೇಲಕೆ ಮೇಲಕೆ ಹತ್ತೋಣ
ಮಹಿಷಾಸುರನ ದಿಟ್ಟಿಸಿ ನೋಡುತ
ಬೆಟ್ಟದ ನಂದಿಗೆ ನಮಿಸೋಣ

ಚಿಲಪಿಲಿ ನಾದವ ಕೇಳುತನಾವು
'ಝೂ' ನೋಡಲು ಹೋಗೋಣ
ಬಿಳಿಹುಲಿ ನೋಡುತ ಮುಂದಕೆ- ಸಾಗುತ
ಚಿಂಪಾಂಜಿಗೆ ಹಲೊ ಎನ್ನೋಣ

ರವಿವರ್ಮನ ಆ ಕುಂಚದ ಕಲೆಯನು
ಕಣ್ಮನದಿ ಸೆರೆ ಹಿಡಿಯೋಣ
ಬಣ್ಣ ಬಣ್ಣದ ರಂಗನು ಅರಿಯುತ
ದಸರಾ ದರ್ಬಾರ ನೋಡೋಣ

ಬನ್ನಿರಿ ಬನ್ನಿರಿ ಗೆಳೆಯರೆ ಬನ್ನಿರಿ
ಬನ್ನಿ ಮಂಟಪಕೆ ಸಾಗೋಣ
ಮೈಸೂರು ಅರಸರ ಶ್ರೇಷ್ಠ ಪರಂಪರೆ
ಯುಗ ಯುಗಗಳಲಿ ಉಳಿಸೋಣ

– ಎಂ. ವಿವೇಕ್ ಭರಣಿ



HZK380

ಶಬ್ದಗಳ ಅರ್ಥ

ವಿಶ್ವವಿಖ್ಯಾತ - ಜಗತ್ಪ್ರಸಿದ್ಧ; ನಾದ - ಶಬ್ದ , ಧ್ವನಿ

ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ವಿಶ್ವವಿಖ್ಯಾತ ದಸರಾ ಯಾವ ಊರಿನಲ್ಲಿ ನಡೆಯುತ್ತದೆ?

_____

ಆ) ನಾವು ಯಾವ ಬೆಟ್ಟವ ಹತ್ತೋಣ ?

_____

ಇ) ಚಿಲಿಪಿಲಿ ನಾದವು ಎಲ್ಲಿ ಕೇಳಿ ಬರುತ್ತದೆ ?

_____

ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.

ಅ) _____

ಉತ್ತರ _____

ಆ) _____

ಉತ್ತರ _____

ಪ್ರಶ್ನೆ ೩) ಮೈಸೂರು ನಗರದ ವರ್ಣನೆಯನ್ನು, ನಿಮ್ಮ ಮಾತುಗಳಲ್ಲಿ ಬರೆಯಿರಿ.

ಉಪಕ್ರಮ : ಪ್ರಾಣಿ ಸಂಗ್ರಹಾಲಯಕ್ಕೆ ಭೇಟಿಕೊಟ್ಟು ಅಲ್ಲಿಯ ಮಾಹಿತಿಯನ್ನು ಪಡೆದುಕೊಳ್ಳಿರಿ.

ಐತಿಹಾಸಿಕ ನಗರ, ಕುತೂಹಲಗಳ ಆಗರ

